## ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

### ಹಾಗೂ ವೈಟ್ ಫೀಲ್ಡ್‌ನ ವೈದೇಹಿ ಆಸ್ಪತ್ರೆ ಮತ್ತು ವಿಜಯನಗರದ ಲಯನ್ಸ್ ಕ್ಲಬ್ ರವರುಗಳ ಸಹಯೋಗದೊಂದಿಗೆ

### ದಿನಾಂಕ: 15–09–2024

## ಉಚಿತ ಆರೋಗ್ಯ ತಪಾಸಣಾ ಶಿಬಿರದ

## ಸಚಿತ್ರಗಳ ಒಂದು ಪಕ್ಷಿ ನೋಟ

ದಿನಾಂಕ: 15–09–2024 ರಂದು ಭಾನುವಾರದ ಬೆಳಿಗ್ಗೆ 09–00 ಗಂಟೆಯಿಂದ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬೆಂಗಳೂರು ವೈಟ್ ಫೀಲ್ಡ್ ನಲ್ಲಿರುವ ವೈದೇಹಿ ಆಸ್ಪತ್ರೆ ಮತ್ತು ವಿಜಯನಗರದ ಲಯನ್ಸ್ ಕ್ಲಬ್ ರವರುಗಳ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸೇವಾ ನಿರತ ಪೊಲೀಸ್ ಅಧಿಕಾರಿಗಳೂ ಸೇರಿದಂತೆ ಇತರ ಜನ–ಸಾಮಾನ್ಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.









ಕಾರ್ಯದರ್ಶಿಯವರಾದ ಶ್ರೀ ಎಮ್. ಶಂಕರಪ್ಪನವರು ರವರು ಪ್ರಾಸ್ತಾವಿಕವಾಗಿ ಮಾತನಾಡಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿ, ಆರೋಗ್ಯ ತಪಾಸಣೆಗೆ ಸಹಕರಿಸುತ್ತಿದ್ದ, ವಿಜಯನಗರದ ಲಯನ್ಸ್ ಕ್ಲಬ್‌ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಗೂ ವೈಟ್ ಫೀಲ್ಡ್ ನಲ್ಲಿರುವ ವೈದೇಹಿ ಆಸ್ಪತ್ರೆ ವೈದ್ಯರುಗಳು ತಂಡ, ಸಂಘದ ಹಿರಿಯ/ಕಿರಿಯ ಸದಸ್ಯರುಗಳೂ ಸೇರಿದಂತೆ ನೆರೆದಿದ್ದ ಎಲ್ಲರಿಗೂ ಹಾರ್ದಿಕವಾಗಿ ಸ್ವಾಗತ ಕೋರಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುತ್ತಿರುವ ಚಿತ್ರಗಳು.






























ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಬಿ.ಪಿ. ಮತ್ತು ಶುಗರ್ ಪರೀಕ್ಷೆ ಮಾಡಿಸುತ್ತಿರುವ ಫೋಟೊಗಳು.





ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ನೋಂದಣಿ ಮಾಡಿಸುತ್ತಿರುವುದು.









ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಬಿ.ಪಿ. ಮತ್ತು ಶುಗರ್ ಪರೀಕ್ಷೆ ಮಾಡಿಸುತ್ತಿರುವುದು.





ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಅಪರೂಪಕ್ಕೆ ಭೇಟಿಯಾಗಿ ಲೋಕಾಭಿರಾಮ ಸಂಭಾಷಣೆಯಲ್ಲಿ ತೊಡಗಿರುವುದು.





ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಅವರವರ ಆರೋಗ್ಯಕ್ಕೆ ಸಂಬಂಧಿಸಿದಂತೆ ಔಷಧಿ/ಮಾತ್ರೆಗಳನ್ನು ಉಚಿತವಾಗಿ ಪಡೆದುಕೊಂಡರು.







ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಅಪರೂಪಕ್ಕೆ ಭೇಟಿಯಾಗಿ ಲೋಕಾಭಿರಾಮ ಸಂಭಾಷಣೆಯಲ್ಲಿ ತೊಡಗಿರುವುದು.






ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೈದ್ಯರ ತಂಡ, ಲಯನ್ಸ್ ಕ್ಲಬ್ಬಿನ ಪದಾಧಿಕಾರಿಗಳು ಹಾಗೂ ತಪಾಸಣೆಗೆ ಆಗಮಿಸಿದ್ದ ಸದಸ್ಯರೂ ಸೇರಿದಂತೆ ಸಾರ್ವಜನಿಕರಿಗೆಲ್ಲರಿಗೂ ಮಧ್ಯಾಹ್ನದ ವರ್ಕಿಂಗ್ ಲಂಚ್ ನ್ನು ಸಂಘದ ವತಿಯಿಂದ ಆಯೋಜಿಸಲಾಗಿತ್ತು.







ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೈದ್ಯರ ತಂಡಕ್ಕೆ ಗುಲಾಬಿ ಹೂ ಗುಚ್ಛ ನೀಡಿ ಅಭಿನಂದನೆಯ ಗೌರವ ಸಲ್ಲಿಸಲಾಯಿತು.














ಕ.ರಾ.ನಿ.ಪೊ.ಅ.ಕ್ಷೇ.ಸಂಘವು ತನ್ನ ಅಭಿವೃದ್ಧಿ ಕಾರ್ಯಗಳಡಿಯಲ್ಲಿ ಆಗಾಗ್ಗೆ ಕೈಗೊಳ್ಳುವ ಕಾರ್ಯಕ್ರಮಗಳಲ್ಲೊಂದಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಬೆಂಗಳೂರು ವೈಟ್ ಫೀಲ್ಡ್ ನ ವೈದೇಹಿ ಆಸ್ಪತ್ರೆ ಮತ್ತು ವಿಜಯನಗರದ ಲಯನ್ಸ್ ಕ್ಲಬ್ ರವರುಗಳ ಸಹಯೋಗದೊಂದಿಗೆ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಈ ಆರೋಗ್ಯ ತಪಾಸಣೆಯಡಿಯಲ್ಲಿ ಹೃದಯ ಸಂಬಂಧೀ ಖಾಯಿಲೆಗಳು, ಕ್ಯಾನ್ಸರ್ ತೊಂದರೆ, ನರರೋಗ ಸಮಸ್ಯೆ, ಎಲುಬು-ಕೀಲುಗಳ ತೊಂದರೆ, ಕಿಡ್ನಿಯಲ್ಲಿ ಕಲ್ಲು, ಕಣ್ಣಿನ ತೊಂದರೆ, ಮಕ್ಕಳ ತೊಂದರೆ, ಬಿ.ಪಿ./ಶುಗರ್ ಇತ್ಯಾದಿಗಳ ಬಗ್ಗೆ ತಪಾಸಣೆಯನ್ನು ಕೈಗೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಸುಮಾರು ಶತಕ ದಷ್ಟು ಮಂದಿ ಆಗಮಿಸಿ, ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯನ್ನು ತಿಳಿಸಲು ಹರ್ಷಿಸುತ್ತೇವೆ. ಇನ್ನು ಮುಂದೆಯೂ ಜನೋಪಯೋಗಿ ಕಾರ್ಯಗಳನ್ನು ಸಂಘವು ಮುಂದುವರಿಸುತ್ತದೆಂದೂ, ತಮ್ಮ ಸಹಕಾರ ಹಾಗೂ ಪ್ರೋತ್ಸಾಹವನ್ನು ಮುಂದೆಯೂ ತಮ್ಮ ಹಾಜರಿಯನ್ನು ನಿರೀಕ್ಷಿಸುತ್ತೇವೆ.

ಇಂತೀ,

ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು




ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

* * * * *